## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳ ನ್ಯಾಯಾಲಯ, ಮುಳಬಾಗಿಲು.

ಸಿ.ಸಿ.ನಂಃ **54/2024**

| | | |
|---|---|---|
| ಫಿರ್ಯಾದುದಾರರು | : | ಎಂ. ನಾರಾಯಣಸ್ವಾಮಿ, 42 ವರ್ಷ,<br>ಬಿನ್ಃ ಮುದ್ದಪ್ಪ. |
| | ವಿರುದ್ಧ | |
| ಆರೋಪಿ | : | ರಾಘವೇಂದ್ರ ಸಿ.ವಿ., 37 ವರ್ಷ,<br>ಬಿನ್ಃ ವೆಂಕಟಕೃಷ್ಣಪ್ಪ. |

### ದಂಡ ಪ್ರಕ್ರಿಯಾ ಸಂಹಿತೆ ಕಲಂ-**251** ರ ಪ್ರಕಾರ ಆರೋಪಣೆ

ಆರೋಪಿಯಾದ ನೀವು ಫಿರ್ಯಾದುದಾರರಿಂದ ಪಡೆದುಕೊಂಡ ಸೂಕ್ತ ಮೌಲ್ಯವುಳ್ಳ ಪ್ರತಿಫಲದ ಬಾಬ್ತು ಅವರಿಗೆ ಕೊಡಬೇಕಾಗಿರುವ ಹಣದ ಮರು-ಪಾವತಿಗಾಗಿ ಬಂಗಾರಪೇಟೆ ಶಾಖೆಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕಿನ ಚೆಕ್ ನಂ.**108665**, ದಿನಾಂಕಃ**08.11.2023** ರ ಚೆಕ್ಕನ್ನು ರೂ.**4,00,000/-** (ನಾಲ್ಕು ಲಕ್ಷ ರೂಪಾಯಿ)ಗಳಿಗೆ ನೀಡಿದ್ದು, ಸದರಿ ಚೆಕ್ಕನ್ನು ಫಿರ್ಯಾದುದಾರರು ನಗದುಗೊಳಿಸಲು ಮುಳಬಾಗಿಲು ಶಾಖೆಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕ್ ಇಲ್ಲಿಗೆ ಹಾಜರುಪಡಿಸಿದಾಗ ಸದರಿ ಚೆಕ್ಕು **"Confirmation not received from the customer, customer advised to honour this instrument"** ಎಂಬ ಕಾರಣಕ್ಕಾಗಿ ಅನಾದರಣಗೊಂಡಿರುತ್ತದೆ. ಈ ಬಗ್ಗೆ ಫಿರ್ಯಾದುದಾರರು ತಮ್ಮ ವಕೀಲರ ಮೂಲಕ ನೋಟೀಸ್ ದಿಃ04.12.2023 ರಂದು ನೀಡಿ ಸದರಿ ಸಂಗತಿಯನ್ನು ತಿಳಿಸಿದಾಗ್ಯೂ ಸಹ ನೀವು ಫಿರ್ಯಾದುದಾರರಿಗೆ ನಿಯಮಿತ ಅವಧಿಯಲ್ಲಿ ಹಣನ್ನು ಸಂದಾಯ ಮಾಡುವಲ್ಲಿ ವಿಫಲರಾಗಿರುತ್ತೀರಿ. ಆ ಕಾರಣದಿಂದ ನೀವು ವರ್ಗಾವಣೀಯ ಲಿಖಿತಗಳ ಅಧಿನಿಯಮ ಕಾಯ್ದೆಯ ಕಲಂ-138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತೀರಿ ಅಂತ ನಿಮ್ಮ ವಿರುದ್ಧ ಆರೋಪಣೆ ಹೊರಿಸಲಾಗಿದೆ.

ಪ್ರಃ1 ಮೇಲಿನ ಆರೋಪಣೆಯನ್ನು ಓದಿ ವಿವರಿಸಿದ್ದು ಅರ್ಥವಾಯಿತೆ?

ಉಃ

ಪ್ರಃ2 ಮೇಲಿನ ಆರೋಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆ?
ಉಃ

ಮೇಲಿನ ಆರೋಪಣೆಯನ್ನು ಆರೋಪಿಗೆ ಓದಿ ವಿವರಿಸಿ ಅವರು ಕೊಟ್ಟ ಉತ್ತರವನ್ನು ನಾನೇ ಸ್ವತಃ ಕೇಳಿ ಬರೆದುಕೊಂಡಿರುವುದು ನಿಜವಾಗಿದೆ ಎಂದು ದೃಢೀಕರಿಸುತ್ತೇನೆ.

(ಹರೀಶ್ ಜಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಮುಳಬಾಗಿಲು.

ದಿಃ**11.08.2025**

ಆರೋಪಿ ಸಹಿ